ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ನನಗೆ ಈಗತಾನೆ ಗೊತ್ತಾಯಿತು. ಮಾನ್ಯ ಸದಸ್ಯರು ಬಹಳ ಪ್ರಮುಖವಾದ ವಿಷಯವನ್ನು ಕೇಳಿದ್ದಾರೆ. ನಾನು ಸಾಯಂಕಾಲದ ಒಳಗೆ ಇನ್‌ಫಾರ್ಮೇಶನ್ ತರಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಈ ನೋಟೀಸನ್ನು ಒಂದು ದಿವಸ ಮುಂಚೆ ನಿಮಗೆ ಕೊಡುತ್ತೇವೆ. ಸಂಬಂಧಪಟ್ಟ ಸಚಿವರಿಗೆ ತಲುಪದಿದ್ದರೆ, ಆ ನೋಟೀಸ್ ತಲುಪಿದ ಮೇಲೆ ಉತ್ತರ ಕಳುಹಿಸಲಿ. ಆದರೆ ನನಗೆ ಆಶ್ಚರ್ಯ ಏನೆಂದರೆ, ಈಗ ನಮ್ಮ ನಿಯಾಮಾವಳಿಗಳ ಪ್ರಕಾರ, ನಮ್ಮ ಪದ್ಧತಿ ಪ್ರಕಾರ ಕೆಲವು ಸೆಲೆಕ್ಟೆಡ್ ಪ್ರಶ್ನೆಗಳಿಗೆ ಮಾತ್ರ ತಾವು ಅವಕಾಶ ಕೊಡುತ್ತೀರಿ. ಹಿಂದಿನ ದಿವಸ ನಾವು ಕೊಟ್ಟಿರುತ್ತೇವೆ. ಸಚಿವರಿಗೆ ತಲುಪಿಲ್ಲ, ಇನ್‌ಫಾರ್ಮೇಶನ್ ತರಿಸಿಕೊಂಡಿಲ್ಲ ಎಂದು ಇಬ್ಬರು ಸಚಿವರು ನಮ್ಮ ಪಕ್ಷದ ಇಬ್ಬರು ಸದಸ್ಯರಿಗೆ ಸರಿಯಾದ ಉತ್ತರ ಕೊಟ್ಟಿಲ್ಲ, ಇನ್ನು ಮೇಲಾದರೂ ಆ ರೀತಿ ಆಗದಂತೆ ತಾವು ಅದರ ಬಗ್ಗೆ ಸ್ವಲ್ಪ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(4) ಬೆಂಗಳೂರಿನಿಂದ ನೇರವಾಗಿ ತಿರುಮಲೆಗೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಸಂಚಾರ,

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಉಪಸಭಾಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನಿಂದ ತಿರುಮಲೆಗೆ ನೇರ ಬಸ್ ಸಂಪರ್ಕವನ್ನು ಟಿ.ಟಿ.ಡಿ.ಯವರು ಕಲ್ಪಿಸಿರುವುದು ಸರಿಯಷ್ಟೆ. ಈ ಮಾರ್ಗ ಪರವಾನಗಿಯನ್ನು ಟಿ.ಟಿ.ಡಿ.ಯವರು ಮಾತ್ರ ಇಟ್ಟುಕೊಂಡಿದ್ದು, ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಕೇವಲ ತಿರುಪತಿಯವರೆವಿಗೆ ಮಾತ್ರ ಇರುವುದರಿಂದ ಆದಾಯ ಮಟ್ಟದಲ್ಲಿ ಕುಸಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ? ಸರ್ಕಾರದ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಸಹ ತಿರುಮಲೆಗೆ ಹೋಗುವ ಹಾಗೆ ಮಾಡಲು ಮಾರ್ಗ ಪರವಾನಗಿ ಪಡೆಯುವ ಬಗ್ಗೆ ಟಿ.ಟಿ.ಡಿ.ಯೊಡನೆ ಒಪ್ಪಂದ ಮಾಡಿಕೊಳ್ಳುವ ಪ್ರಸ್ತಾಪ ಸರ್ಕಾರದ ಮುಂದಿದೆಯಾ? ಟಿ.ಟಿ.ಡಿ. ಈ ಮಾರ್ಗ ಪರವಾನಗಿ ನೀಡಲು ಸಹಕರಿಸದಿದ್ದಲ್ಲಿ ಈಗಾಗಲೇ ಟಿ.ಟಿ.ಡಿ.ಯವರಿಗೆ ನೀಡಿರುವ ಬೆಂಗಳೂರು-ತಿರುಪತಿ ಮಾರ್ಗ ಪರವಾನಗಿ ರದ್ದು ಪಡಿಸಿ ಈ ಮಾರ್ಗದಲ್ಲಿ ಆಗುತ್ತಿರುವ ಆದಾಯ ಕುಸಿತ ತಪ್ಪಿಸುವುದೇ ಎಂಬ ವಿಷಯದ ಬಗ್ಗೆ ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ನಡುವೆ ಇರುವ ಪರಸ್ಪರ ಒಪ್ಪಂದದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬೆಂಗಳೂರಿನಿಂದ ತಿರುಪತಿಗೂ ಮತ್ತು ಆಂಧ್ರ ಪ್ರದೇಶ ರಾಜ್ಯ ಸಾರಿಗೆ ಸಂಸ್ಥೆಯವರು ತಿರುಪತಿಯಿಂದ ಬೆಂಗಳೂರಿಗೂ ಮಜಲುಗಾಡಿ ವಾಹನಗಳನ್ನು ಸಂಚರಿಸಲು ಪರವಾನಿಗೆಯನ್ನು ಪಡೆದು ಓಡಿಸುತ್ತಿದ್ದಾರೆ.

ಆದರೆ ತಿರುಪತಿಯಿಂದ ತಿರುಮಲೆ ಬೆಟ್ಟವು ಆಂಧ್ರಪ್ರದೇಶ ರಾಜ್ಯದ ವ್ಯಾಪ್ತಿಯಲ್ಲಿ ಇರುವುದರಿಂದ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ತಿರುಪತಿ ತಿರುಮಲೆ ದೇವಸ್ಥಾನಂ (ಟಿ.ಟಿ.ಡಿ) ಯವರಿಂದ ಅನುಮತಿ ಪಡೆದು ಮಜಲು ವಾಹನವನ್ನು ಓಡಿಸಲು ಅಭ್ಯಂತರವಿರುವುದಿಲ್ಲ. ಆದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ತಿರುಮಲೆ ಬೆಟ್ಟಕ್ಕೆ ಹೋಗಬೇಕಾದಲ್ಲಿ ಟಿ.ಟಿ.ಡಿ.ಯವರ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಹಾಗೂ ಬೆಂಗಳೂರಿನಿಂದ ತಿರುಮಲೆ ಬೆಟ್ಟಕ್ಕೆ ನೇರವಾಗಿ ಸಂಚಾರ ಮಾಡಲು ಅಂತರ ರಾಜ್ಯ ಪರಸ್ಪರ ಒಪ್ಪಂದ ಆಗಬೇಕು. ಈ ವಿಷಯದಲ್ಲಿ ಸರ್ಕಾರವು

ಆಂಧ್ರಪ್ರದೇಶ ರಾಜ್ಯ ಸರ್ಕಾರದೊಂದಿಗೆ ಪರಸ್ಪರ ಒಪ್ಪಂದದ ಬಗ್ಗೆ ಪತ್ರ ವ್ಯವಹಾರವನ್ನು ಮಾಡಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳು ಕೇವಲ ತಿರುಪತಿಯವರೆಗೆ ಮಾತ್ರ ಹೋಗುವುದರಿಂದ ಇವರ ಆದಾಯ ಮಟ್ಟದಲ್ಲಿ ಕುಸಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇದರಿಂದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಬೆಂಗಳೂರಿನಿಂದ ತಿರುಪತಿಗೆ ಹೋಗುವ ಸುತ್ತುವಳಿಗಳ ಆದಾಯದಲ್ಲಿ ಶೇ 15ರಷ್ಟು ಇಳಿಮುಖವಾಗಿರುವುದು. ಪ್ರತಿ ಸುತ್ತುವಳಿಯಲ್ಲಿ ಬರುತ್ತಿದ್ದ ಸರಾಸರಿ ರೂ 2,066.00ಗಳ ಆದಾಯ ರೂ 1,756.00 ಕ್ಕೆ ಇಳಿದಿದೆ. ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಾಡಿದ ಮನವಿಯನ್ನು ಪುರಸ್ಕರಿಸಲಿಲ್ಲವಾದುದರಿಂದ ಕರ್ನಾಟಕ ಸರ್ಕಾರವು ಇತ್ತೀಚೆಗೆ ಆಂಧ್ರ ಪ್ರದೇಶ ಸರ್ಕಾರಕ್ಕೆ ಒಂದು ಪತ್ರ ಬರೆದು ಸದರಿ ಮಾರ್ಗದ ಮೇಲೆ ಪರಸ್ಪರತೆ ಉಳಿಸಲು ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬೆಂಗಳೂರು-ತಿರುಮಲ ಮಾರ್ಗದ ಮೇಲಿನ ತನ್ನ ಬಸ್ಸುಗಳನ್ನು ತಿರುಪತಿಯವರೆಗೆ ಮಾತ್ರ ಓಡಿಸುವಂತೆ ತಿಳುವಳಿಕೆ ನೀಡಲು ಕೋರಲಾಗಿದೆ. ಇಲ್ಲದಿದ್ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ತಿರುಮಲೆವರೆಗೆ ಓಡಿಸಲು ಸಹ ಅನುಮತಿ ನೀಡುವಂತೆ ಕೋರಿಲಾಗಿದ್ದು ಆ ಸರ್ಕಾರದ ಉತ್ತರಕ್ಕಾಗಿ ನಿರೀಕ್ಷಿಸಲಾಗುತ್ತಿದೆ.

(5) ದ.ಕನ್ನಡ ಜಿಲ್ಲೆಯ ಸಮುದ್ರ ಕೊರೆತ ಸಂಭವಿಸಿದಾಗ ಕಾಮಗಾರಿ ಕೆಲಸಕ್ಕೆ ಬಿಡುಗಡೆಯಾದ ಹಣ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 1993ರಲ್ಲಿ 12 ತುರ್ತು ಕೆಲಸಗಳಿಗಾಗಿ ರೂ. 11.86ಲಕ್ಷ ವೆಚ್ಚದಲ್ಲಿ ಕಾಮಗಾರಿ ಮಾಡಲಾಗಿತ್ತು. ಈ ಬಗ್ಗೆ ಈ ವರೆಗೆ ಆಡಳಿತ ಅನಮೋದನೆ ನೀಡಿಲ್ಲ. 1994ನೇ ಇಸವಿಯಲ್ಲಿ ರೂ. 51.38 ಲಕ್ಷ ಆಡಳಿತ ಅನುಮೋದನೆ ನೀಡಿದ್ದರೂ ಕೇವಲ ರೂ. 15 ಲಕ್ಷ ಬಿಡುಗಡೆ ಗೊಳಿಸಿದ್ದು ರೂ. 36.38 ಲಕ್ಷ ಬಾಕಿ ಇರಿಸಲಾಗಿದೆ. 1995ರಲ್ಲಿ ಅತ್ಯಂತ ತೀವ್ರ ಸಮುದ್ರ ಕೊರೆತದಿಂದಾಗಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ತುರ್ತು ಕೆಲಸ ಸರ್ಕಾರ ಮಾಡಿಸಿದ್ದರೂ ಈ ಬಗ್ಗೆ ಈವರೆಗೆ ಯಾವುದೇ ಆಡಳಿತ ಅನುಮೋದನೆಯಾಗಲೀ, ಹಣ ಬಿಡುಗಡೆಯಾಗಲೀ ಆಗಿಲ್ಲ. ಈ ಬಗ್ಗೆ ಕಾಮಗಾರಿ ಮಾಡಿದ ಗುತ್ತಿಗೆದಾರರು ಇನ್ನೊಂದು ಸಮುದ್ರ ಕೊರೆತ ನಡೆದಾಗ ತುರ್ತು ಕೆಲಸ ಮಾಡಲು ಮುಂದೆ ಬಾರದಿದ್ದರೆ ನಡೆಯಲಿರುವ ಅನಾಹುತಕ್ಕೆ ಯಾರು ಕಾರಣರಾಗುತ್ತಾರೆ ಎನ್ನುವುದನ್ನು ತಿಳಿಸುವಿರಾ? 1993-1994-1995ರ ಈ ತುರ್ತು ಕಾಮಗಾರಿಗಳ ಆಡಳಿತ ಅನುಮೋದನೆ ಮತ್ತು ಹಣ ಬಿಡುಗಡೆ ಯಾವಾಗ ಮಾಡುತ್ತೀರಿ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1993ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 12 ತುರ್ತು ಕಾಮಗಾರಿಗಳನ್ನು ರೂ. 11.86 ಲಕ್ಷ ವೆಚ್ಚದಲ್ಲಿ ಜಿಲ್ಲಾಧಿಕಾರಿಗಳ ಅನುದಾನದಲ್ಲಿ ಮಾಡಲಾಗಿದೆ. ಈ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಅದೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಹಣ ಬಿಡುಗಡೆ ಕೋರಲು ನೀರಾವರಿ ಇಲಾಖೆಯಿಂದ ಕೋರಲಾಗಿತ್ತು ಆದರೆ ಹಣ ಬಿಡುಗಡೆಯಾಗಿರುವುದಿಲ್ಲ. ಇದರ ಬಗ್ಗೆ ಪರಿಶೀಲಿಸಿ ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದು.